Series JBB/C

SET-4

Code No. **13/C**

Roll No. | | | | | | | | |

Candidates must write the Code on the title page of the answer-book.

| | ಸೂಚನೆಗಳು | | NOTE |
|---|---|---|---|
| (I) | ಈ ಪ್ರಶ್ನೆ ಪತ್ರಿಕೆಯಲ್ಲಿ **11** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ. | (I) | Please check that this question paper contains **11** printed pages. |
| (II) | ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು. | (II) | Code number given on the right hand side of the question paper should be written on the title page of the answer-book by the candidate. |
| (III) | ಈ ಪ್ರಶ್ನೆ ಪತ್ರಿಕೆಯಲ್ಲಿ **IX** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ. | (III) | Please check that this question paper contains **IX** questions. |
| (IV) | ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ. | (IV) | Please write down the Serial Number of the question in the answer-book before attempting it. |
| (V) | ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು. | (V) | 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period. |

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* | *ಗರಿಷ್ಠ ಅಂಕಗಳು : 80*

*Time allowed : 3 hours* | *Maximum Marks : 80*

**ಸೂಚನೆಗಳು :** ಈ ಪ್ರಶ್ನೆ ಪತ್ರಿಕೆಯು A, B, C ಮತ್ತು D ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.

| | | |
|---|---|---|
| **ವಿಭಾಗ – A** (ವಾಚನ ಮತ್ತು ಗ್ರಹಿಕಾ ಕೌಶಲ) | : | 12 ಅಂಕಗಳು |
| **ವಿಭಾಗ – B** (ಬರವಣಿಗೆ ಕೌಶಲ) | : | 15 ಅಂಕಗಳು |
| **ವಿಭಾಗ – C** (ಅನ್ವಯಿಕ ವ್ಯಾಕರಣ) | : | 18 ಅಂಕಗಳು |
| **ವಿಭಾಗ – D** (ಪಠ್ಯಗಳ ಅಧ್ಯಯನ) | : | 35 ಅಂಕಗಳು |

## ವಿಭಾಗ – A

## (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

**I.** 1. ಈ ಗದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ಮಾನವನು ಹುಟ್ಟಿದ ದಿನದಿಂದ ಸತ್ತಮೇಲೂ ಉಪಯೋಗಕ್ಕೆ ಬರುವ ಸಸ್ಯವೆಂದರೆ ಬಿದಿರು. ಪುಟ್ಟ ಮಗುವಿಗೆ ಬಿದಿರಿನ ತೊಟ್ಟಿಲು ತಾಯಿಯ ಮಡಿಲಿನ ಆಸರೆಯನ್ನು ನೀಡುತ್ತದೆ. ಹಾಗೆಯೇ ಸತ್ತ ನಂತರ ಶವವನ್ನು ಬಿದಿರಿನ ಚಟ್ಟದ ಮೇಲೆ ಸ್ಮಶಾನಕ್ಕೆ ಒಯ್ಯಲಾಗುತ್ತದೆ. ಆದ್ದರಿಂದ ಈ ಬಿದಿರು ಮನುಷ್ಯ ಜೀವನದ ಅವಿಭಾಜ್ಯ ಅಂಗ ಎಂದರೆ ಅತಿಶಯೋಕ್ತಿಯಲ್ಲ.

ಬಿದರು ಸಸ್ಯಶಾಸ್ತ್ರದಲ್ಲಿ 'ಬ್ಯಾಂಬೂ ಸಾಯ್ದಿಯೇ' ಎಂಬ ವರ್ಗಕ್ಕೆ ಸೇರಿದೆ ಪ್ರಪಂಚದ ಎಲ್ಲಾ ಸಸ್ಯ ಪ್ರಕಾರಗಳಲ್ಲಿ ಬಿದಿರು ಅತಿ ಬೇಗನೆ ಬೆಳೆಯುವ ಸಸ್ಯ ಮತ್ತು ಅತಿ ಎತ್ತರದ ಹುಲ್ಲು ಎಂಬ ಖ್ಯಾತಿಯನ್ನು ಹೊಂದಿದೆ.

ಎಳೇ ಬಿದಿರನ್ನು ಕಳಲೆ ಎಂದು ಕರೆಯುತ್ತಾರೆ. ಇದರಿಂದ ಪಲ್ಯ, ಹುಳಿ, ವಡೆ, ದೋಸೆ, ಉಪ್ಪಿನಕಾಯಿ ಇತ್ಯಾದಿ ಹಲವಾರು ತಿನಿಸುಗಳನ್ನು ತಯಾರಿಸುತ್ತಾರೆ. ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಇವು ಜನಪ್ರಿಯ ಖಾದ್ಯಗಳು.

ಬಿದಿರಿನ ಛಾವಣಿ, ಬೀಸಣಿಗೆ, ಮೊರ, ಧಾನ್ಯದ ಕಣಜ, ಏಣಿ, ಹರಿಗೋಲು, ಪೀಠೋಪಕರಣ, ಅಲಂಕಾರಿಕ ವಸ್ತು ಇತ್ಯಾದಿಗಳು ಬಿದಿರಿನ ಉಪಯೋಗವನ್ನು ತಿಳಿಸುತ್ತವೆ. ಕಾಗದದ ತಯಾರಿಕೆಯಲ್ಲಿ ಬಿದಿರು ಮಹತ್ವದ ಪಾತ್ರ ವಹಿಸುತ್ತದೆ.

ಬಿದಿರಿಗೆ ಸಂಸ್ಕೃತದಲ್ಲಿ 'ವಂಶ' ಎಂದು ಕರೆಯುತ್ತಾರೆ. ವಂಶದಿಂದ ಮಾಡಿದ ಕೊಳಲು 'ವಂಶಿ'. ಆದುದರಿಂದಲೇ ಶ್ರೀಕೃಷ್ಣನಿಗೆ ವಂಶೀಧರ ಎಂಬ ಹೆಸರೂ ಇದೆ. ಬಿದಿರಿನಿಂದ ಮಾಡಿದ ತಮಟೆ, ಡೋಲು ಇತ್ಯಾದಿ ವಾದ್ಯಗಳು ಪ್ರಚಲಿತದಲ್ಲಿವೆ. ಮಣಿಪುರದ ಬಿದಿರಿನ 'ಕೋಲು ನೃತ್ಯ' ವಿಶ್ವವಿಖ್ಯಾತವಾಗಿದೆ.

**ಪ್ರಶ್ನೆಗಳು :**

(ಅ) ಬಿದಿರು ಸಸ್ಯಶಾಸ್ತ್ರದ ಯಾವ ವರ್ಗಕ್ಕೆ ಸೇರಿದೆ ? *1*

(ಆ) ಕಳಲೆಯಿಂದ ಯಾವ ಖಾದ್ಯಗಳನ್ನು ಮಾಡುತ್ತಾರೆ ? *2*

(ಇ) ಕೃಷ್ಣನಿಗೆ 'ವಂಶೀಧರ' ಎಂಬ ಹೆಸರು ಬರಲು ಕಾರಣವೇನು ? *1*

(ಈ) ಬಿದಿರಿನಿಂದಾಗುವ ಉಪಯೋಗಗಳಾವುವು ? *2*

2. ಈ ಪದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ಸಿದ್ಧಾರ್ಥ ಬುದ್ಧನಾದ ಪರಿಯ ನೀವು ತಿಳಿಯಿರಿ
ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯ ನೀವು ಕೇಳಿರಿ ॥
ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು
ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು.
ಕಾಡು ಮೇಡು ಅಲೆದ ಅವಗೆ
ಬೋಧಿ ವೃಕ್ಷ ಒಲಿದು ಕರೆಯಿತು
ಹಗುಲು – ರಾತ್ರಿ ತಪಸು ಗೈಯೆ
ದಿವ್ಯಜ್ಞಾನ ಮಿಂಚಿತು; ನಾಡಿನರ್ಥ ಹೊಳೆಯಿತು.

ಕಾಡತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು
ಗೂಡಿನಲ್ಲಿ ಹಾಡು ಹುಟ್ಟಿ ಹೊಸ ರಾಗ ಕೇಳಿತು
ಮಕರಂದ ಸವಿಯಲೆಂದು ದುಂಬಿ ಹೂವ ಸೇರಿತು
ಗಿಡಗಿಡವೂ ಅಪ್ಪಿಕೊಂಡು ಕುಣಿಯುವಂತೆ ಕಂಡಿತು.

ಕಾಡಿನಿಂದ ಎದ್ದ ಅವನು ನಾಡಿನತ್ತ ಹೊರಟನು
ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು
ತಪಸಿಗಿಂತ ಜೀವ ಪ್ರೀತಿ ದೊಡ್ಡದೆಂದು ತಿಳಿದನು
ಬದುಕಿನ ಗೂಢಾರ್ಥವರಿತು ಬುದ್ಧನಾಗಿ ಬಂದನು.

**ಪ್ರಶ್ನೆಗಳು :**

(ಅ) ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ ? *1*

(ಆ) ಸಿದ್ಧಾರ್ಥನು ಯಾರ ಹಾಗೂ ಯಾವುದರ ಮೋಹವನ್ನು ತೊರೆದನು ? *2*

(ಇ) ಗೂಡಿನಿಂದ ಏನು ಕೇಳಿತು ? *1*

(ಈ) ಬುದ್ಧನು ಅರಿತುಕೊಂಡ ಬದುಕಿನ ಗೂಢಾರ್ಥವೇನು ? *2*

## ವಿಭಾಗ – B

## (ಬರವಣಿಗೆ ಕೌಶಲ) : 15 ಅಂಕಗಳು

**II.** ಕೆಳಗಿನ ಯಾವುದಾದರೂ **ಒಂದು** ವಿಷಯವನ್ನು ಕುರಿತು 150 ಪದಗಳಿಗೆ ಮೀರದಂತೆ ನಿಬಂಧವನ್ನು ಬರೆಯಿರಿ : *6*

(ಅ) ಗ್ರಾಮ ಸ್ವರಾಜ್ಯ

(ಆ) ಗ್ರಂಥಾಲಯಗಳ ಮಹತ್ವ

(ಇ) ಮಕ್ಕಳ ಸರ್ವಾಂಗೀಣ ಪ್ರಗತಿಯಲ್ಲಿ ಪೋಷಕರ ಪಾತ್ರ

**III.** ನಿಮ್ಮ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು ಅದನ್ನು ಪರಿಹರಿಸುವಂತೆ ವಿನಂತಿಸಿ ನಿಮ್ಮ ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ. *5*

**ಅಥವಾ**

ದಿನಾಂಕ 25.02.2020 ರ ಪ್ರಜಾವಾಣಿ ದಿನಪತ್ರಿಕೆಯ ಜಾಹೀರಾತಿನ ಮೇರೆಗೆ 'ನಿರ್ದೇಶಕರು, ಆಕಾಶವಾಣಿ ಕೇಂದ್ರ, ಬೆಂಗಳೂರು' – ಇವರಿಗೆ ಅರ್ಜಿಯನ್ನು ಬರೆಯಿರಿ.

**IV.** ಪರಿಸರ ದಿನಾಚರಣೆಯ ಅಂಗವಾಗಿ ನಿಮ್ಮ ಶಾಲೆಯು ಆಯೋಜಿಸಿದ್ದ ಸ್ವಚ್ಛತಾ ಅಭಿಯಾನದ ಕಾರ್ಯಕ್ರಮದ ವರದಿಯನ್ನು ಬರೆಯಿರಿ. *4*

## ವಿಭಾಗ – C

## (ಅನ್ವಯಿಕ ವ್ಯಾಕರಣ) : 18 ಅಂಕಗಳು

**V.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರವನ್ನು ಬರೆಯಿರಿ :

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ : *2*

   (i) ತೆರೆದಿಕ್ಕುವ

   (ii) ಸುರಾಸುರ

2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ : *2*

   (i) ರಾಜೀವ ಸಖ

   (ii) ಮೆಲ್ವಾತು

3. ಕೆಳಗಿನ ಪದ/ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ : *2*

   (i) ದಂಗು ಬಡಿ

   (ii) ಶಾಕಾಹಾರ

4. ಕೆಳಗಿನ ಪದಗಳಿಗೆ ತತ್ಸಮ / ತದ್ಭವ ರೂಪವನ್ನು ಬರೆಯಿರಿ : *1*

(i) ದಿಟ್ಟಿ

(ii) ಅಂಗಳ

5. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : *1*

(i) ಮೇದಿನಿ

(ii) ಹಗೆ

6. ಈ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : *1*

(i) ಸಮಷ್ಟಿ

(ii) ನ್ಯಾಯ

7. ಈ ಪದಗಳಲ್ಲಿರುವ ಧಾತುಗಳನ್ನು ಗುರುತಿಸಿ ಬರೆಯಿರಿ : *1*

(i) ನಕ್ಕರು

(ii) ಮೂಡುವನು

8. ಕೆಳಗಿನ ಗ್ರಾಮ್ಯ ಪದಗಳ ಗ್ರಾಂಥಿಕ ರೂಪವನ್ನು ಬರೆಯಿರಿ : *1*

(i) ಉಳಿಯದ್ದಂಗ

(ii) ಕಪಾಳಕ

9. ಕೆಳಗಿನ ಹಳೆ / ಹೊಸ ಕನ್ನಡ ವಿಭಕ್ತಿಯನ್ನು ಹೆಸರಿಸಿ : *1*

(i) ಪೊಳಲೊಳ್

(ii) ಅರಸನಿಗೆ

10. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗಮನಿಸಿ, ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ : 1

(i) ವ್ಯಾಪಾರಿ : ಅನ್ವರ್ಥನಾಮ : : ನದಿ : __________

(ii) ನಿಗಿನಿಗಿ : ಅನುಕರಣ ವಾಚಕ : : ತುತ್ತತುದಿ : __________

11. ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಬದಲಾಯಿಸಿ : *1*

"ಬೇಸಿಗೆಯಲ್ಲಿ ಹೂವಿನ ಗಿಡಗಳು ಬಾಡುತ್ತವೆ."

12. ಈ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ : *1*

“ನಮ್ಮೂರಿನ ಜನರು ಒಂದೇ ವರ್ಷದಲ್ಲಿ ಹನುಮ ದೇವರ ದೇಗುಲವನ್ನು ಕಟ್ಟಿದರು.”

13. ಈ ವಾಕ್ಯವನ್ನು ನಿಷೇಧಾರ್ಥಕ ರೂಪಕ್ಕೆ ಬದಲಾಯಿಸಿ : *1*

“ಅಣ್ಣನು ಈ ದಿನ ಸಂಜೆ ಬರುತ್ತಾನೆ.”

14. ಕೆಳಗಿನ ಗಾದೆ ಮಾತುಗಳಲ್ಲಿ ಒಂದನ್ನು ವಿವರಿಸಿ : *2*

(i) “ಕೂಡಿ ಬಾಳಿದರೆ ಸ್ವರ್ಗ ಸುಖ.”

(ii) “ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ?”

## ವಿಭಾಗ – D

## (ಪದ್ಯಗಳ ಅಧ್ಯಯನ) : 35 ಅಂಕಗಳು

**VI.** ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : *1×10=10*

1. ಶಬರಿಯು ಈ ಆಶ್ರಯದಲ್ಲಿ ವಾಸವಿದ್ದಳು :

(i) ವಿಂದ್ಯಾಶ್ರಮದಲ್ಲಿ

(ii) ಮತಂಗಾಶ್ರಮದಲ್ಲಿ

(iii) ವಿಶ್ವಾಮಿತ್ರ ಋಷ್ಯಾಶ್ರಮದಲ್ಲಿ

(iv) ದೂರ್ವಾಸ ಮುನಿಯಾಶ್ರಮದಲ್ಲಿ

2. “ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು.” – ಈ ಮಾತನ್ನು ಹೇಳಿದವರು :

(i) ಶಬರಿ

(ii) ರಾಮ

(iii) ಲಕ್ಷ್ಮಣ

(iv) ಮಾತಂಗ ಋಷಿ

3. ‘ಸಾಪೇಕ್ಷ ಸಿದ್ಧಾಂತ’ವನ್ನು ಪ್ರತಿಪಾದಿಸಿದವರು ಇವರು :

(i) ಐನ್‌ಸ್ಟೈನ್

(ii) ಟಾಲ್‌ಸ್ಟಾಯ್

(iii) ಗೆಲಿಲಿಯೊ

(iv) ಥಾಮಸ್ ಎಡಿಸನ್

4. ವಚನಕಾರರಿಗೆ ಇದು ದೇವರಾಗಿತ್ತು :

(i) ಲಿಂಗದೇವರು

(ii) ಕೂಡಲ ಸಂಗಮ

(iii) ಅವರವರ ಪ್ರಜ್ಞೆ

(iv) ಜಂಗಮರು

5. ಸರ್ ಎಮ್. ವಿಶ್ವೇಶ್ವರಯ್ಯನವರಿಗೆ ತಮ್ಮ ಮಾತು ಕಡಿಮೆ, ಕೆಲಸ ಹೆಚ್ಚು ಎಂದು ಇವರು ಹೇಳಿದರು :

(i) ಗಾಂಧೀಜಿ

(ii) ನೆಹರು

(iii) ಕೃಷ್ಣರಾಜ ಒಡೆಯರ್

(iv) ಲಾರ್ಡ್ ಸಂಡ್ ಹರ್ಸ್ಟ್

6. ಬರಡಾಗಿರುವ ಕಾಡು ಮೇಡುಗಳಿಗೆ ನಾವು ಈ ರೀತಿ ತಲುಪೋಣ ಎಂದು ಕವಿ ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ :

(i) ಸೂರ್ಯ ರಶ್ಮಿಯಾಗಿ

(ii) ಆಮ್ಲಜನಕವಾಗಿ

(iii) ತಂಗಾಳಿಯಾಗಿ

(iv) ವಸಂತನಾಗಿ

7. ‘ಹಲಗಲಿ ಬೇಡರು’ ಲಾವಣಿಯು ಓದುಗರಲ್ಲಿ ಈ ಭಾವನೆಯನ್ನು ಉತ್ತೇಜಿಸುತ್ತದೆ :

(i) ಶಾಂತ ಭಾವನೆ

(ii) ವೀರತ್ವದ ಭಾವನೆ

(iii) ಶೃಂಗಾರ ಭಾವನೆ

(iv) ಹಾಸ್ಯ ಭಾವನೆ

8. ಕುಂಪಣಿ ಸರ್ಕಾರ ಈ ಶಾಸನವನ್ನು ಜಾರಿಗೆ ತಂದಿತು :

(i) ಹಲ್ಮಿಡಿ ಶಾಸನ

(ii) ಹಲಗಲಿ ಶಾಸನ

(iii) ನಿಶ್ಶಸ್ತ್ರೀಕರಣ ಶಾಸನ

(iv) ತುರ್ತು ಶಾಸನ

9. ಇದು ‘ಸಂಕಲ್ಪ ಗೀತೆ’ ಕವಿತೆಯ ಆಕರ ಗ್ರಂಥವಾಗಿದೆ :

(i) ಎದೆ ತುಂಬಿ ಹಾಡಿದೆನು

(ii) ಸಾಮಗಾನ

10. ‘ಹಸುರು’ ಕವಿತೆಯು ಕವಿಗೆ __________ ದಲ್ಲಿ ಉಂಟಾದ ಸೌಂದರ್ಯಾನುಭವ.

(i) ಧಾರವಾಡ

(ii) ಶ್ರೀಶೈಲ

(iii) ಕವಿಶೈಲ

(iv) ಆಗಸ

**VII.** ಕೆಳಗಿನ ಪ್ರಶ್ನೆಗಳಿಗೆ 4 – 5 ವಾಕ್ಯಗಳಲ್ಲಿ ಉತ್ತರ ಬರೆಯಿರಿ : *3×4=12*

1. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು ?

2. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ :

"ಮೊಟ್ಟ ಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು"

**ಅಥವಾ**

"ದೇವರೇ, ಮರ ಹತ್ತುವಷ್ಟು ಅವಕಾಶ ಕರುಣಿಸು"

3. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

4. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ :

"ಮಂಗಳ ಲೋಕದ ಅಂಗಳಕೇರಿ"

**ಅಥವಾ**

"ಬೇರೆ ಬಣ್ಣವನೇ ಕಾಣೆ"

**VIII.** ಕೆಳಗಿನ ಪ್ರಶ್ನೆಗಳಿಗೆ 8 – 10 ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ : *4×2=8*

1. ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

'ವೃಕ್ಷಸಾಕ್ಷಿ' ಕಥೆಯಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ? ಮತ್ತು ಏಕೆ ಮೆಚ್ಚುತ್ತೀರಿ, ವಿವರಿಸಿ.

2. ಯುದ್ಧದ ಸಮಯದಲ್ಲಿ ಕರ್ಣನನ್ನು ಪಾಂಡವರ ಕಡೆಗೆ ಸೆಳೆಯಲು ಕೃಷ್ಣನು ಯಾವ ತಂತ್ರವನ್ನು ಅನುಸರಿಸಿದನು ? ಅದಕ್ಕೆ ಕರ್ಣನ ಪ್ರತಿಕ್ರಿಯೆ ಏನು ? ವಿವರಿಸಿ.

**ಅಥವಾ**

"ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" – ಈ ಮಾತು ಲವನಿಗೆ ಹೇಗೆ ಅನ್ವಯಿಸುತ್ತದೆ ? ವಿವರಿಸಿ.

**IX.** ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ :
(ಪಠ್ಯ ಪೋಷಕ ಅಧ್ಯಯನದಿಂದ) *1×5=5*

1. ವಿವೇಕಾನಂದರೆಂದರೆ ಯಾವುದರ ರೂಪಕವಾಗಿದೆ ?

2. ಪುಟ್ಟಿಯ ಪ್ರಶ್ನೆಗಳೇನು ?

3. ಭಗತ್‌ಸಿಂಗ್ ಹೇಗೆ ಹುತಾತ್ಮನಾದನು ?

4. ಮೃಗದ ಬಾಹ್ಯ ಆಕಾರ ಹೇಗಿತ್ತು ?

5. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ ?